ಹವ್ಯಾಳ ಅಕ್ಕನಿರಬಹುದೆಂದನ್ನಿಸಿತು. ಆ ಪರಿಯ ಸಾಮ್ಯ! ಜೊತೆಗೊಂದಿಷ್ಟು ವಯಸ್ಸು!! ಆಕೆ ಅವಸವರಸವಾಗಿ ಏನನ್ನೋ ಹೇಳಲಿದ್ದವಳು, ನನ್ನನ್ನೂ, ಮಧುಕರಿಯನ್ನೂ ನೋಡಿ, ಒಮ್ಮೆಗೇ ಬಿಗುಮಾನ ತಾಳಿದಳು. 'ಅಲೇಖ್... ಹವ್ಯಾನ ಸ್ವಲ್ಪ ಕರೆದೊಯ್ಯುಲಾ? ಅಮ್ಮ ಕರೀತಿದ್ದಾಳೆ...' ಅಂತಂದಳು. ಹವ್ಯಾ, ತಕ್ಷಣವೇ ನಮ್ಮತ್ತ ನೋಡಿ, 'ಕ್ಷಮೆಯಿರಲಿ... ಐ ವಿಲ್ಲ್ ಜಸ್ಟ್ ಬಿ ಬ್ಯಾಕ್...' ಅಂತಂದು ಹೊರಟಳು. ಬೆನ್ನಿನಲ್ಲಿಯೇ ಅವಳು ವಯಸ್ಸನ್ನೂ, ಕನ್ನೆತನವನ್ನೂ ಅಳೆದೆ.

ನನಗಂತೂ ಅಲೇಕ್ಯನ ಸಂಭ್ರಮದ ನಡುವಿನಿಂದ ಕಳಚಿಕೊಂಡರೆ ಸಾಕನ್ನಿಸಿತ್ತು. 'ನೀನು ಹೋಗೋದಿಲ್ಲವಾ, ಅಲೇಕ್ಯ? ಈ ಹೊತ್ತಿನಲ್ಲಿ ನೀನು ಅವಳೊಡನಿರಬೇಕು...' ನಾನು ಹೇಳಿದೆ. 'ಯೂ ನೀಡ್ ಟು ನೀಡ್ ಹರ್ ಮೋರ್ ದ್ಯಾನ್ ಯುವರ್ ಫ್ರೆಂಡ್ಸ್ ನವ್ವ್!' – ಅಂತಲೂ, ಸೋಗಿಗೊಗ್ಗರಿಸಿದೆ.

'ಕಮ್ಮಾನ್ ಸುಮೋದ್... ಐ ಲವ್ಯೂ ಟೂ ಆಸ್ಮಚ್...' ಅಲೇಕ್ಯ ನಗುತ್ತ ನನ್ನ ಹೆಗಲು ಬಳಸಿಕೊಂಡು ಹೇಳಿದ. 'ನೀವಿಬ್ಬರೂ ನನಗೆ ಅಷ್ಟೇ ಇಂಪಾರ್ಟೆಂಟು ಗೊತ್ತಾ?' ಅನ್ನುತ್ತ, ಮಧುಕರಿಯನ್ನು ಅವನ ಸೊಂಟದಿಂದ ಬಾಚಿ, ಬದಿನಿಲ್ಲಿಸಿಕೊಂಡು ಹೇಳಿದ. ಇಲ್ಲದ ಫೋಟೋ – ಮೊಮೆಂಟಿಗೆ ಮೂವರೂ ಪೋಸು ಕೊಟ್ಟಂತನ್ನಿಸಿತು.

★★★

'ನಾವಿನ್ನು ಹೊರಡುತೀವಿ, ಅಲೇಕ್ಯ... ವಿ ಆರ್ ಇನ್ನ ಬಿಟ್ ಆಫ್ ಟೆನ್ಷನ್...' ಮಧುಕರಿ, ಅಲೇಕ್ಯನ ಹಿಡಿತ ತಪ್ಪಿಸಿಕೊಳ್ಳುವ ಹಾಗೆ ಹೇಳಿದ.

'ಏನಪ್ಪ ಅಂತಹ ಟೆನ್ಷನ್ನು? ನನಗೆ ಗೊತ್ತಿಲ್ಲದೇ ಇರೋದು? ಅಥವಾ ಗೊತ್ತಾಗಬಾರದ್ದು?!' ಅಲೇಕ್ಯ ಮಾತಿನಲ್ಲೇ ಬಿಗಿ ಹೆಚ್ಚಿಸಿದ.

ಇಬ್ಬರಿಗೂ ಚಡಪಡಿಸುವುದಾಯಿತು. ಮಾತು ತಡವರಿಸಿತು.

'ಐಕ್ಯಾ ವಿಚಾರ ತಾನೆ?' ಎಂದು ಖಂಡಿತವೆಂಬಂತೆ ಕೇಳಿದ ಅಲೇಕ್ಯನ ಮಾತು ನಿಚ್ಚಳವಾಗಿತ್ತು. 'ಅವಳನ್ನು ಅವಳ ನೇರಕ್ಕೆ ನಡೆಯೋಕೆ ಬಿಡೋದೇ ಸರಿ, ಸುಮೋದ್...'

ನಿಂತಲ್ಲೇ ನೆಲ ಕುಸಿಯಿತು! ಸಿಡಿಲೆಂಬ ಸಿಡಿಲೇ ಮರಳಿ ಸಿಡಿಲಾಗಿ ಮರುಕಳಿಸುವುದೆ?! ಮತ್ತೆ ಮತ್ತೆ ಆಘಾತ ಪಡುವುದಾಯಿತು! 'ಎ... ಏ... ನು ವಿಷಯ, ಅಲೇಕ್ಯ, ನೀನು ಹೇಳುತಾ ಇರೋದು?!' ದಿಗಿಲೊಳಗೇ ದಿಗಿಲಾಗಿ ಕೇಳಿದೆ.

'ಏನೂಂತ ನಿನಗೆ ಗೊತ್ತು, ಸುಮೋದ್...' ಅಲೇಕ್ಯ ಹೇಳುವಾಗ ಮತ್ತೂ ಆಶ್ಚರ್ಯವಾಯಿತು! 'ನನಗೆಲ್ಲ ವಿಷಯವೂ ಗೊತ್ತು, ಮಧು ಸರ್... ನಾನೇ ಐಕ್ಯಾಗೆ ಹೀಗೆಲ್ಲ ಹೇಳಿಕೊಟ್ಟಿದ್ದು... ಆದರೆ ಇಷ್ಟು ಬೇಗ ನಿರ್ಧಾರ ಕೈಕೊಳ್ಳುತಾಳೆ ಅಂದುಕೊಂಡಿರಲಿಲ್ಲ...' ಅಂತಂದು, ಕಿಸೆಯಲ್ಲಿದ್ದ ತನ್ನ ಮೊಬೈಲು ತೆರೆದು ತೋರಿದ. 'ಐ ಹ್ಯಾವ್ ಡಿಸೈಡೆಡ್... ನಾನು ನನ್ನ ನಿರ್ಧಾರಕ್ಕೆ ಬದ್ಧ...' ಎಂಬ ಐಕ್ಯಾಳ ಮೆಸೇಜು ನನ್ನ ಕಣ್ಣೆದುರು ತಂತಾನೇ ಸಶಬ್ದ ಓದಿಕೊಂಡಿತು! 'ನಿನ್ನ ಅಪ್ಪಅಮ್ಮನಿಗೆ ಈಗಿಂದೀಗಲೇ ತಿಳಿಸು...' ಎಂದು ಇವನೂ ವಾಪಸು ಬರೆದಿದ್ದ. ಕಣ್ಣುಗಳಲ್ಲಿ ಉಕ್ಕಿ ಧುಮ್ಮಿಕ್ಕಿದ ಖೇದವೊರೆಸಿಕೊಂಡು, ಮಂಜುಮಂಪರಿನ ನಡುವೆ ಅವು ಯಾವೊತ್ತು ಜರುಗಿದ ಮೆಸೇಜೆಂದು ನೋಡಿದೆ. ಕೆಲಸಮಯದ ಹಿಂದಷ್ಟೇ ನಡೆದ ವಿನಿಮಯ! ವಿಚಿತ್ರವೆನ್ನಿಸಿತು. ಇವನು ಹಸೆಮಣೆಯಲ್ಲಿದ್ದುಕೊಂಡು ಯಾವ ಮಾಯೆಯಲ್ಲಿ ನನ್ನ ಮಗಳೊಡನೆ ಸಂವಹಿಸಿದ?! ಹೇಗೆ? ಯೋಚನೆಯಾಯಿತು. ಇನ್ನು, ಈ ಐಕ್ಯಾಳಿಗೆ ಅಲೇಕ್ಯ ಮದುವೆಯಾಗುತ್ತಿರುವ ವಿಷಯ ಗೊತ್ತೆ? ನಾನಂತೂ ಹೇಳಿಲ್ಲ. ಹೇಗೆ ಗೊತ್ತಾಗಿರಬಹುದು?